KASM630022572021

Presented on : 26-10-2021
Registered on : 26-10-2021
Decided on : 12-08--2026
Duration : 4 years, 9 months, 17 days

# ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.

: ಉಪಸ್ಥಿತರು :

**ಶ್ರೀ ಮಾದೇಶ ಎಂ.ವಿ., ಬಿ.ಕಾಂ., ಎಲ್.ಎಲ್.ಬಿ.**

ಪ್ರಭಾರ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಾಗರ.

ದಿನಾಂಕಃ 12 ನೇ ಆಗಸ್ಟ್ 2026

**ಅಸಲು ದಾವಾ ನಂ. 172/2021**

**ವಾದಿ:** ನೇತ್ರಾವತಿ ಕೋಂ ಹುಚ್ಚಪ್ಪ
ವಯಸ್ಸು ಸುಮಾರು 35 ವರ್ಷ,
ವಾಸಃ ತ್ಯಾಗರ್ತಿ ಗ್ರಾಮ,
ಆನಂದಪುರ ಹೋಬಳಿ
ಸಾಗರ ನಗರ, ಶಿವಮೊಗ್ಗ ಜಿಲ್ಲೆ.

***(ವಾದಿ ಪರ ಶ್ರೀ ಹೆಚ್ ಎನ್ ಡಿ., ವಕೀಲರು)***

–ವಿರುದ್ಧ–

**ಪ್ರತಿವಾದಿಯರು:** 1.ಹುಚ್ಚಪ್ಪ ಬಿನ್ ಮಂಜಪ್ಪ
ವಯಸ್ಸು 40 ವರ್ಷ,

**2**.ಸಂತೋಷ ಬಿನ್ ಮಂಜಪ್ಪ
ವಯಸ್ಸು **35** ವರ್ಷ,
**3**.ದೇವಮ್ಮ ಕೋಂ ಮಂಜಪ್ಪ
ವಯಸ್ಸು **65** ವರ್ಷ,

ಎಲ್ಲರ ವಾಸಃ ತ್ಯಾಗರ್ತಿ ಗ್ರಾಮ,
ಆನಂದಪುರ ಹೋಬಳಿ,
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

*(1 ನೇ ಪ್ರತಿವಾದಿ ಏಕಪಕ್ಷೀಯ)*

*(ಪ್ರತಿನಿಧಿಸುವವರು 2 ಮತ್ತು ಪ್ರತಿವಾದಿ ಪರ ಶ್ರೀ*

*ಎಸ್.ಎಂ.ಎಲ್.,ವಕೀಲರು)*

| | | |
|---|---|---|
| ದಾವೆಯನ್ನು ಹೂಡಿದ ದಿನಾಂಕ | : | 26.10.2021 |
| ದಾವೆಯ ಸ್ವರೂಪ | : | ಶಾಶ್ವತ ಪ್ರತಿಬಂಧಕಾಜ್ಞೆ |
| ಸಾಕ್ಷಿಗಳನ್ನು ವಿಚಾರಣೆ ಮಾಡಲು | | |
| ಪಾರಂಭಿಸಿದ ದಿನಾಂಕ | : | 07.01.2026 |
| ತೀರ್ಪನ್ನು ಉಚ್ಚರಿಸಿದ ದಿನಾಂಕ | : | 12.08.2026 |
| ಒಟ್ಟು ಅವಧಿ | : | ವರ್ಷಗಳು/ತಿಂಗಳು/ದಿನಗಳು |
| | | 4 9 17 |

**(ಮಾದೇಶ ಎಂ.ವಿ.,)**
ಪ್ರಭಾರ 1 ನೇ ಹೆಚ್ಚುವರಿ ಸಿವಿಲ್
ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಸಾಗರ.

## **ತೀರ್ಪು**

ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆ ಪರಿಹಾರ ಕೋರಿ ಸಲ್ಲಿಸಿದ್ದಾರೆ.

## **ಶೆಡ್ಯೂಲು:**

ಸಾಗರ ತಾಲೂಕು ಆನಂದಪುರ ಹೋಬಳಿ ತ್ಯಾಗರ್ತಿ ಗ್ರಾಮದ ಸರ್ವೆ ನಂಬರ್ 43 ರಲ್ಲಿರುವ 30 ಎಕರೆ 29 ಗುಂಟೆ ಜಮೀನಿನ ಪೈಕಿ 3 ಎಕರೆ ಬಗರ್ ಹುಕುಂ ಸ್ವಾಧೀನ ಅನುಭವದಲ್ಲಿರುವ ಜಮೀನು. ಇದಕ್ಕೆ ಚಕ್ಕುಬಂದಿ:

- ಪೂರ್ವಕ್ಕೆ ನಿಂಗಪ್ಪ ಇವರ ಜಮೀನು.
- ಪಶ್ಚಿಮಕ್ಕೆ ಬಾಳೆಗುಂಡಿ ಮಂಜಪ್ಪನ ಜಮೀನು.
- ಉತ್ತರಕ್ಕೆ ವಾದಿ ಪ್ರತಿವಾದಿ ಕುಟುಂಬದ ಸರ್ವೆ ನಂಬರ್ 37 ರಲ್ಲಿನ ಖಾತೆ ಜಮೀನು.
- ದಕ್ಷಿಣಕ್ಕೆ ಪುಟ್ಟಪ್ಪನ ಬಗರ್ ಹುಕುಂ ಜಮೀನು.

ಈ ಮೇಲ್ಕಂಡ ಷೆಡ್ಯೂಲ್‌ನಲ್ಲಿರುವ ಸ್ವತ್ತು ಈ ದಾವೆಯ ವಸ್ತು ವಿಷಯವಾಗಿದ್ದು, ಇನ್ನು ಮುಂದೆ 'ದಾವಾ ಸ್ವತ್ತು' ಎಂದು ಸಂಬೋಧಿಸಲಾಗುವುದು.

2. ***ವಾದಿಯ ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.***

1 ನೇ ಪ್ರತಿವಾದಿ ವಾದಿಯ ಗಂಡನಾಗಿದ್ದು, 2 ಮತ್ತು 3 ನೇ ಪ್ರತಿವಾದಿಯರು ಕ್ರಮವಾಗಿ 1 ನೇ ಪ್ರತಿವಾದಿಯ ತಮ್ಮ ಹಾಗೂ ತಾಯಿಯಾಗಿರುತ್ತಾರೆ. ವಾದಿ

ಪ್ರತಿವಾದಿಯರ ಕುಟುಂಬಕ್ಕೆ ಆನಂದಪುರ ಹೋಬಳಿ ತ್ಯಾಗರ್ತಿ ಗ್ರಾಮದ ಸರ್ವೆ ನಂಬರ್ 37/ಆರ್.ಎಸ್. ನಲ್ಲಿ 37 ಗುಂಟೆ ಜಮೀನಿರುತ್ತದೆ. ವಾದಿ 1 ನೇ ಪ್ರತಿವಾದಿಯನ್ನು 18 ವರ್ಷಗಳ ಹಿಂದೆ ಮದುವೆಯಾಗಿದ್ದು, ಇವರ ದಾಂಪತ್ಯದಲ್ಲಿ ಇಬ್ಬರು ಮಕ್ಕಳು ಜನಿಸಿದ್ದು, ಮದುವೆಯಾದ 5 ವರ್ಷಗಳವರೆಗೆ ವಾದಿಯನ್ನು 1 ನೇ ಪ್ರತಿವಾದಿ ಚೆನ್ನಾಗಿ ನೋಡಿಕೊಂಡಿದ್ದು, ನಂತರ ಹೆಂಡತಿ ಮತ್ತು ಮಕ್ಕಳಿಗೆ 1 ನೇ ಪ್ರತಿವಾದಿಯು ದೈಹಿಕ ಮತ್ತು ಮಾನಸಿಕವಾಗಿ ಹಿಂಸೆ ಮಾಡಿ ಅವರನ್ನು ಮನೆಯಿಂದ ಹೊರಹಾಕಿದ ನಂತರ ಅನಿವಾರ್ಯವಾಗಿ ವಾದಿ ಗಂಡನಿಂದ ಹೊರಬಂದು ಬೇರೆಯಾಗಿ ವಾಸವಾಗಿರುತ್ತಾರೆ. 1 ನೇ ಪ್ರತಿವಾದಿಯ ದುರ್ವರ್ತನೆಗೆ 2 ಮತ್ತು 3 ನೇ ಪ್ರತಿವಾದಿಯರು ಸಹಾಯ ಮಾಡುತ್ತಾ ಬಂದಿದ್ದಾರೆ. ವಾದಿಯು 1 ನೇ ಪ್ರತಿವಾದಿಯಿಂದ ಹೊರಬಂದ ನಂತರ ಕೂಲಿ ಮಾಡಿಕೊಂಡು ಜೀವನ ಮಾಡುತ್ತಿದ್ದು, ತನಗೆ ಕೃಷಿ ಜಮೀನು ಇಲ್ಲದ ಕಾರಣ, ಸರ್ವೆ ನಂಬರ್ 37 ರಲ್ಲಿ 37 ಗುಂಟೆ ಜಮೀನಿನ ದಕ್ಷಿಣ ದಿಕ್ಕಿನಲ್ಲಿ ತ್ಯಾಗರ್ತಿ ಗ್ರಾಮದ ಸರ್ವೆ ನಂಬರ್ 43/ಆರ್.ಎಸ್. ನಲ್ಲಿ 3 ಎಕರೆ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ. ಸದರಿ ದಾವಾ ಸ್ವತ್ತನ್ನು ವಾದಿಯು ಹೇರಳ ಶ್ರಮವಹಿಸಿ ಸಾಗುವಳಿ ಮಾಡಿ, ಯೋಗ್ಯ ಭೂಮಿಯನ್ನಾಗಿ ಪರಿವರ್ತನೆ ಮಾಡಿಕೊಂಡು ಲಾಗಾಯ್ತಿನಿಂದ ಜೋಳ, ಶುಂಟಿ ಹಾಗೂ ಇತರೆ ಬೆಳೆಗಳನ್ನು ಬೆಳೆಯುತ್ತಾ ಸ್ವಾಧೀನ ಅನುಭವದಲ್ಲಿರುತ್ತಾರೆ. ಸದರಿ ಸ್ವತ್ತಿಗೆ ವಾದಿಯ ರಕ್ಷಣೆಗಾಗಿ ಬೇಲಿಯನ್ನು ನಿರ್ಮಿಸಿರುತ್ತಾರೆ. ದಾವಾ ಸ್ವತ್ತಿನಲ್ಲಿ ವಾದಿಯು

ತನ್ನ ತಾಯಿಯ ಸಹಾಯ ಪಡೆದು ಅಡಿಕೆ ಗಿಡಗಳನ್ನು ನೆಡಲು ಟ್ರೆಂಚ್ ಹೊಡೆಸಿ, ಬೋರ್‌ವೆಲ್ ಅನ್ನು ಸಹ ತೆಗೆಸಿರುತ್ತಾರೆ. ಸದರಿ ದಾವಾ ಸ್ವತ್ತಿನ ಮಂಜೂರಾತಿಗಾಗಿ ವಾದಿಯು ಬಗರ್ ಹುಕುಂ ಸಮಿತಿಗೆ ನಮೂನೆ–57 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯು ಇತ್ಯರ್ಥಕ್ಕೆ ಬಾಕಿ ಇರುತ್ತದೆ. ವಾದಿಯಲ್ಲದೆ ದಾವಾ ಸ್ವತ್ತಿನಲ್ಲಿ ಇತರೆ ಯಾರಿಗೂ ಹಕ್ಕು, ಬಾಧ್ಯತೆ, ಆಸಕ್ತಿ ಮತ್ತು ಸ್ವಾಧೀನ ವಗೈರೆ ಇರುವುದಿಲ್ಲ. ಸದರಿ ದಾವಾ ಸ್ವತ್ತು ವಾದಿಯ ಸ್ವಾಧೀನದಲ್ಲಿದೆ ಎನ್ನುವ ಬಗ್ಗೆ ವಾದಿಯು ಸಲ್ಲಿಸಿದ ನಮೂನೆ–57 ರ ಅರ್ಜಿಯ ಹಿಂಬರಹ, ನಮೂನೆ–94 ಸಿ ಅರ್ಜಿಗೆ ನೀಡಿದ ಹಿಂಬರಹ ಹಾಗೂ ಕಚ್ಚಾ ನಕ್ಷೆಯನ್ನು ಹಾಜರುಪಡಿಸಿರುತ್ತಾರೆ.

3. ಪ್ರತಿವಾದಿಯರು ಅದೇ ಗ್ರಾಮದ ವಾಸಿಗಳಾಗಿದ್ದು, ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಹಾಗೂ ಸ್ವಾಧೀನ ಇಲ್ಲದಿದ್ದರೂ, ವಾದಿಯ ಅಸಹಾಯಕತೆಯನ್ನು ದುರ್ಬಳಕೆ ಮಾಡಿಕೊಂಡು ದಾವಾ ಸ್ವತ್ತಿನಲ್ಲಿ ಜಂಬಿಟ್ಟಿಗೆ ಕಲ್ಲನ್ನು ತೆಗೆಯುವ ದುರುದ್ದೇಶದಿಂದ ದಿನಾಂಕ: 05.10.2021 ರಂದು ಪ್ರತಿವಾದಿಯರು ತಮ್ಮ ಸಹಚರರು ದಾವಾ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿ ಜೆಸಿಬಿ ಯಂತ್ರದಿಂದ ಮಣ್ಣನ್ನು ತೆಗೆದು ಮೇಲ್ಭಾಗದಲ್ಲಿರುವ ಜಂಬಿಟ್ಟಿಗೆ ಕಲ್ಲನ್ನು ತೆಗೆದಿದ್ದು, ಇದನ್ನು ವಾದಿಯು ಅತಿ ಪ್ರಯಾಸದಿಂದ ತಡೆದು ದಿನಾಂಕ: 08.10.2021 ರಂದು ಗ್ರಾಮಾಂತರ ಪೊಲೀಸ್ ಠಾಣೆ ಹಾಗೂ ತಹಶೀಲ್ದಾರರಿಗೆ ದೂರನ್ನು ನೀಡಿದ್ದರೂ ಸಹ ಅವರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ

ಜಂಬಿಟ್ಟಿಗೆ ತೆಗೆಯಲು ಸಂಬಂಧಪಟ್ಟ ಇಲಾಖೆಯಿಂದ ಪರವಾನಗಿಯನ್ನು ಸಹ ಪಡೆದಿರುವುದಿಲ್ಲ. ದಿನಾಂಕ: 15.10.2021 ರಂದು ಪ್ರತಿವಾದಿಯರು ತಮ್ಮ ಸಹಚರರೊಂದಿಗೆ ದಾವಾ ಸ್ವತ್ತಿನಿಂದ ವಾದಿಯನ್ನು ಹೊರಹಾಕಲು ಉದ್ದೇಶಿಸಿ, ಸದರಿ ಸ್ವತ್ತಿಗೆ ಅಳವಡಿಸಿದ ಬೇಲಿಯನ್ನು ಕಿತ್ತು, ಅದರಲ್ಲಿರುವ ಜೋಳದ ಬೆಳೆಯನ್ನು ಕಿತ್ತುಹಾಕಲು ಮತ್ತು ವಾದಿಯನ್ನು ದಾವಾ ಸ್ವತ್ತಿನಿಂದ ಒಕ್ಕಲೆಬ್ಬಿಸಲು ವ್ಯರ್ಥ ಪ್ರಯತ್ನ ಮಾಡಿ, ನಂತರ ಈ ಬಗ್ಗೆ ವಾದಿಯು ದೂರನ್ನು ನೀಡಿದ್ದರೂ ಸಹ ಯಾವುದೇ ಪ್ರಯೋಜನವಾಗಿರುವುದಿಲ್ಲ. ಆದ್ದರಿಂದ, ಒಂದು ವೇಳೆ ಪ್ರತಿವಾದಿಯರು ತಮ್ಮ ಕಾನೂನುಬಾಹಿರ ಕೃತ್ಯದಲ್ಲಿ ಸಫಲರಾದರೆ, ವಾದಿಗೆ ಬಹಳಷ್ಟು ಹಾನಿ ಮತ್ತು ನಷ್ಟ ಉಂಟಾಗುತ್ತದೆ. ಸದರಿ ಪ್ರತಿವಾದಿಯರು ಹೆಚ್ಚು ಬಲಾಢ್ಯರಾಗಿರುವುದರಿಂದ, ದಾವಾ ಸ್ವತ್ತನ್ನು ವಾದಿಯು ರಕ್ಷಿಸಿಕೊಳ್ಳುವುದು ನ್ಯಾಯಾಲಯದ ಸಹಾಯವಿಲ್ಲದೆ ಸಾಧ್ಯವಿಲ್ಲ. ದಿನಾಂಕ: 05.10.2021 ಮತ್ತು 15.10.2021 ರಂದು ಪ್ರತಿವಾದಿಯರು ದಾವಾ ಸ್ವತ್ತಿನ ಬೇಲಿಯನ್ನು ಕಿತ್ತು ಅದರಲ್ಲಿರುವ ಬೆಳೆಯನ್ನು ನಾಶ ಮಾಡಿ ಜಂಬಿಟ್ಟಿಗೆ ಕಲ್ಲನ್ನು ಕಿತ್ತುಹಾಕಲು ಪ್ರಯತ್ನಿಸಿದಾಗ, ಈ ದಾವೆಗೆ ವ್ಯಾಜ್ಯ ಕಾರಣ ಉಂಟಾಗಿರುತ್ತದೆ. ಆದ್ದರಿಂದ, ತಮ್ಮ ದಾವೆಯನ್ನು ಪುರಸ್ಕರಿಸಬೇಕೆಂದು ಕೋರಿದ್ದಾರೆ.

4. ದಾವಾ ಸಮನ್ಸ್ ಜಾರಿಯಾದ ನಂತರ 1 ನೇ ಪ್ರತಿವಾದಿಯು ನ್ಯಾಯಾಲಯದ ಮುಂದೆ ಹಾಜರಾಗದೆ ಏಕಪಕ್ಷೀಯರಾಗಿರುತ್ತಾರೆ. 2 ಮತ್ತು 3 ನೇ ಪ್ರತಿವಾದಿಯರು ನ್ಯಾಯಾಲಯದ ಮುಂದೆ ವಕೀಲರ ಮೂಲಕ ಹಾಜರಾಗಿದ್ದರೂ ಸಹ ಯಾವುದೇ

ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ, ದಾವೆಯನ್ನು ವಿಚಾರಣೆಗೆ ಮುಂದೂಡಲಾಯಿತು.

5. ವಾದಿಪರ ಮಂಡಿಸಿದ ವಾದವನ್ನು ಹಾಗೂ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಿದ ನಂತರ, ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆ:

**ಅಂಶಗಳು**

1. ದಾವೆ ಹೂಡುವ ದಿನದಂದು ದಾವಾ ಸ್ವತ್ತಿನ ಕಾನೂನುಬದ್ಧ ಸ್ವಾಧೀನಾನುಭವದಲ್ಲಿದ್ದೇನೆ ಎಂದು ವಾದಿಯು ಸಾಬೀತುಪಡಿಸುವರೇ?
2. ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿನ ವಾದಿಯ ಸ್ವಾಧೀನ ಅನುಭವಕ್ಕೆ ಅಡ್ಡಿಪಡಿಸುತ್ತಿದ್ದಾರೆ ಎಂದು ವಾದಿಯು ಸಾಬೀತುಪಡಿಸುವರೇ?
3. ದಾವೆಯಲ್ಲಿ ಕೋರಿದಂತೆ ಪರಿಹಾರ ಪಡೆಯಲು ವಾದಿಯು ಅರ್ಹರೇ?
4. ಹಾಗಿದ್ದಲ್ಲಿ ಏನು ಆದೇಶ?

6. ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ವಿಚಾರಣೆಗೊಳಪಡಿಸಿಕೊಂಡು, ತನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ಸಲ್ಲಿಸಿ, ತನ್ನ ಮೌಖಿಕ ಸಾಕ್ಷ್ಯದ ಸಮರ್ಥನೆಗೆ ಪೂರಕವಾಗಿ ಒಟ್ಟು 5 ದಾಖಲೆಗಳನ್ನು ನಿಶಾನೆಗಳಾಗಿ

ಗುರುತಿಸಿಕೊಂಡಿರುತ್ತಾರೆ. ಒಂದನೇ ಪ್ರತಿವಾದಿಯು ಏಕಪಕ್ಷೀಯರಾಗಿದ್ದು, ಎರಡು ಮತ್ತು ಮೂರನೇ ಪ್ರತಿವಾದಿಯರು ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿಲ್ಲ ಮತ್ತು ತಮ್ಮ ಪರ ಯಾವುದೇ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿಕೊಂಡಿರುವುದಿಲ್ಲ.

7. ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರವು ಈ ಕೆಳಕಂಡಂತೆ ಇರುತ್ತದೆ.

ಅಂಶ 1 : ನಕಾರಾತ್ಮಕವಾಗಿ

ಅಂಶ 2 : ನಕಾರಾತ್ಮಕವಾಗಿ

ಅಂಶ 3 : ನಕಾರಾತ್ಮಕವಾಗಿ

ಅಂಶ 4 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

## **ಕಾರಣಗಳು**

8. **ಅಂಶ 1 ರಿಂದ 3**:-ಈ ಮೂರು ಅಂಶಗಳ ಮೇಲಿನ ಚರ್ಚೆಯು ಒಂದರ ಮೇಲೆ ಇನ್ನೊಂದು ಅವಲಂಬಿತವಾಗಿರುವುದರಿಂದ ಮತ್ತು ಪ್ರಕರಣದ ವಸ್ತುಸ್ಥಿತಿಗಳ ಮತ್ತು ವಾಕ್ಯಗಳ ಪುನರಾವರ್ತನೆಯನ್ನು ತಪ್ಪಿಸುವುದಕ್ಕಾಗಿ, ಈ ಎಲ್ಲಾ ಅಂಶಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ವಾದಿಯು ದಾವಾ ಸ್ವತ್ತಿನಲ್ಲಿ ಅನಧಿಕೃತ ಸ್ವಾಧೀನ ಹೊಂದಿ ಸಾಗುವಳಿ ಮಾಡಿಕೊಂಡು ಸದರಿ ಸ್ವತ್ತಿನಲ್ಲಿ ಲಾಗಾಯ್ತಿನಿಂದಲೂ ಅದನ್ನು ಅಭಿವೃದ್ಧಿಪಡಿಸಿಕೊಂಡು ಸಾಗುವಳಿ ಮಾಡುತ್ತಿದ್ದಾರೆ. ಸದರಿ ಸ್ವತ್ತಿನಲ್ಲಿ ಪ್ರತಿವಾದಿಯರಿಗೆ ಯಾವುದೇ ಹಕ್ಕು ಮತ್ತು ಸ್ವಾಧೀನ

ಇಲ್ಲದಿದ್ದರೂ ವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಮತ್ತು ವಾದಿಯನ್ನು ದಾವಾ ಸ್ವತ್ತಿನಿಂದ ಹೊರಹಾಕಿ ಅದರಲ್ಲಿ ಜಂಬಿಟ್ಟಿಗೆ ಕಲ್ಲನ್ನು ತೆಗೆಯಲು ಉದ್ದೇಶಿಸಿ, ದಾವಾ ಸ್ವತ್ತಿಗೆ ಅಳವಡಿಸಿರುವ ಬೇಲಿಯನ್ನು ಕಿತ್ತು, ಸದರಿ ವಾದಿಯ ಸ್ವಾಧೀನ ಅನುಭವಕ್ಕೆ ಅಡ್ಡಿ ಆತಂಕಪಡಿಸಿದ್ದಾರೆ ಎಂಬುದಾಗಿ ತನ್ನ ವಾದಪತ್ರದಲ್ಲಿ ಹೇಳಿದ್ದಾರೆ. ಸದರಿ ವಾದಿಯು ಪ್ರಸ್ತುತ ದಾವೆಯನ್ನು ಶಾಶ್ವತ ಪ್ರತಿಬಂಧಕಾಜ್ಞೆ ಪರಿಹಾರ ಕೋರಿ ಸಲ್ಲಿಸಿರುವುದರಿಂದ, ಮೇಲಿನ ಅಂಶಗಳನ್ನು ಸಾಬೀತುಪಡಿಸುವ ಪ್ರಾಥಮಿಕ ಹೊಣೆಗಾರಿಕೆಯು ವಾದಿಯ ಮೇಲೆಯೇ ಇದೆ.

9. ವಾದಿಯು ತನ್ನ ವಾದಪತ್ರದಲ್ಲಿ ಹೇಳಿದ ಎಲ್ಲಾ ಸಂಗತಿಗಳನ್ನು ಪುನರುಚ್ಚರಿಸಿದ್ದಾರೆ. ವಾದಿಯು ಸ್ವತಃ ಒಪ್ಪಿಕೊಂಡಂತೆ, 1 ನೇ ಪ್ರತಿವಾದಿ ವಾದಿಯ ಗಂಡನಾಗಿದ್ದು, 2 ಮತ್ತು 3 ನೇ ಪ್ರತಿವಾದಿಯರು 1 ನೇ ಪ್ರತಿವಾದಿಯ ತಮ್ಮ ಹಾಗೂ ತಾಯಿಯಾಗಿರುತ್ತಾರೆ. ವಾದಿಯು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ನಿ.ಪಿ–1 ಮತ್ತು 2 ರ ದಾಖಲೆಗಳು ಅನುಕ್ರಮವಾಗಿ ಸಾಗರ ತಾಲೂಕು ಆನಂದಪುರ ಹೋಬಳಿ ತ್ಯಾಗರ್ತಿ ಗ್ರಾಮದ ಸರ್ವೆ ನಂಬರ್ 43 ಆರ್.ಎಸ್. ಹಾಗೂ 37 ಆರ್.ಎಸ್. ನ ಪಹಣಿ ಪತ್ರಿಕೆಗಳಾಗಿರುತ್ತವೆ. ಸದರಿ ನಿ.ಪಿ–1 ರ ದಾಖಲೆಯಂತೆ ಸರ್ವೆ ನಂಬರ್ 43 ಆರ್.ಎಸ್. ಒಟ್ಟು 30 ಎಕರೆ 29 ಗುಂಟೆ ಕ್ಷೇತ್ರವಿದ್ದು, ಇದರಲ್ಲಿ ಕೆಲವು ಜನರಿಗೆ ಸ್ವತ್ತು ಮಂಜೂರಾಗಿದ್ದು, ಒಟ್ಟು 23 ಎಕರೆ 26 ಗುಂಟೆ ಕ್ಷೇತ್ರವು ಸರ್ಕಾರದ ಮಾಲೀಕತ್ವದಲ್ಲಿ ಇರುತ್ತದೆ.

10. ನಿ.ಪಿ–1 ರಲ್ಲಿ ವಾದಿಯ ಹೆಸರು ಮಾಲೀಕತ್ವದ ಕಾಲಂ ನಲ್ಲಿ ಆಗಲಿ ಅಥವಾ ಅನುಭವದಾರರ ಕಾಲಂ ನಲ್ಲಿ ಆಗಲಿ ಕಂಡುಬಂದಿರುವುದಿಲ್ಲ. ನಿ.ಪಿ–2 ರಂತೆ ಸದರಿ ಸ್ವತ್ತಿನ ಸರ್ವೆ ನಂಬರ್ 37 ಆರ್.ಎಸ್. ನ ಒಟ್ಟು ಕ್ಷೇತ್ರ 4 ಎಕರೆ 16 ಗುಂಟೆ ಇದ್ದು, ಇದರಲ್ಲಿ 3 ಎಕರೆ 1 ಗುಂಟೆ ಕ್ಷೇತ್ರವು ವಿವಿಧ ಫಲಾನುಭವಿಗಳಿಗೆ ಮಂಜೂರಾಗಿದ್ದು, 1 ಎಕರೆ 15 ಗುಂಟೆ ಕ್ಷೇತ್ರವು ಸರ್ಕಾರದ ಮಾಲೀಕತ್ವದಲ್ಲಿ ಇರುತ್ತದೆ. ಸದರಿ ದಾಖಲೆಯಲ್ಲಿಯೂ ಸಹ, ವಾದಿಯ ಹೆಸರು ಕಂಡುಬಂದಿರುವುದಿಲ್ಲ.

11. ನಿ.ಪಿ–3 ರಂತೆ ವಾದಿಯು ತ್ಯಾಗರ್ತಿ ಗ್ರಾಮದ ಸರ್ವೆ ನಂಬರ್ 43 ರ 3 ಎಕರೆ ಸ್ವತ್ತಿನ ಮಂಜೂರಾತಿ ಕೋರಿ ದಿನಾಂಕ: 14.03.2019 ರಂದು ಸಾಗರ ತಾಲೂಕಿನ ಆನಂದಪುರ ಹೋಬಳಿಯ ನಾಡಕಚೇರಿಗೆ ಅರ್ಜಿಯನ್ನು ಸಲ್ಲಿಸಿ ಸ್ವೀಕೃತಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಯಲ್ಲಿ ದಾವಾ ಸ್ವತ್ತಿನ ಚಕ್ಕುಬಂದಿಯಾಗಲಿ ಅಥವಾ ಉಪ ನಂಬರ್ ಆಗಲಿ ಇರುವುದಿಲ್ಲ. ವಾದಿಯು ಸ್ವತಃ ತನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿದಂತೆ, ದಾವಾ ಸ್ವತ್ತು ಇನ್ನು ವಾದಿಗೆ ಮಂಜೂರು ಆಗಬೇಕಾಗಿದೆ. ಅದೇ ರೀತಿಯಾಗಿ, ವಾದಿಯು ನೀಡಿದ ಅರ್ಜಿಯು ಇನ್ನು ಅಕ್ರಮ ಜಮೀನುಗಳ ಸಕ್ರಮೀಕರಣ ಸಮಿತಿಯ ಮುಂದೆ ಇತ್ಯರ್ಥಕ್ಕೆ ಬಾಕಿ ಇರುತ್ತದೆ. ಆದ್ದರಿಂದ, ದಾವೆ ಹೂಡುವ ದಿನದಂದು ವಾದಿಯು ದಾವಾ ಸ್ವತ್ತಿನ ಕಾನೂನುಬದ್ಧ ಸ್ವಾಧೀನ ಅನುಭವದಲ್ಲಿ ಇಲ್ಲ ಎಂದು ಕಂಡುಬರುತ್ತದೆ.

12. ಅದೇ ರೀತಿಯಾಗಿ, ಸರ್ವೆ ನಂಬರ್ 43 ಮತ್ತು 37 ಆರ್.ಎಸ್. ನ ಜಮೀನುಗಳು ಬಹು ಮಾಲೀಕತ್ವದ ಜಮೀನುಗಳಾಗಿದ್ದು, ಸದರಿ ಸ್ವತ್ತಿನ ಯಾವ ಭಾಗದಲ್ಲಿ ವಾದಿಯು ಸ್ವಾಧೀನ ಅನುಭವದಲ್ಲಿದ್ದಾರೆ ಎನ್ನುವ ಕುರಿತು ಅಧಿಕೃತ ನಕ್ಷೆಯನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಬಹುದೊಡ್ಡ ವಿಸ್ತೀರ್ಣವಿರುವ ಸರ್ವೆ ನಂಬರ್ 43 ಆರ್.ಎಸ್. ನ ಸ್ವತ್ತಿನ ಯಾವ ಕ್ಷೇತ್ರದಲ್ಲಿ, ಯಾವ ಭಾಗದಲ್ಲಿ ವಾದಿಯು ಸ್ವಾಧೀನ ಅನುಭವದಲ್ಲಿದ್ದಾರೆ ಎಂಬುದು ಗುರುತಿಸುವುದು ಅಸಾಧ್ಯವಾಗಿರುತ್ತದೆ. ಅದೂ ಅಲ್ಲದೆ ಸದರಿ ಸ್ವತ್ತು ವಾದಿಗೆ ಇನ್ನು ಮಂಜೂರು ಆಗಿರುವುದಿಲ್ಲ. ನಿ.ಪಿ–3 ರ ಸ್ವೀಕೃತಿಯನ್ನು ಹೊರತುಪಡಿಸಿ, ದಾವಾ ಸ್ವತ್ತಿನ ಸ್ವಾಧೀನ ಅನುಭವದಲ್ಲಿ ವಾದಿಯು ಇದ್ದಾರೆ ಎನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ನಿ.ಪಿ–3 ರಂತೆ 2019 ನೇ ಸಾಲಿನಲ್ಲಿ 3 ಎಕರೆ ಕ್ಷೇತ್ರದ ಮಂಜೂರಾತಿ ಕೋರಿ ವಾದಿಯು ಅರ್ಜಿಯನ್ನು ಸಲ್ಲಿಸಿರುತ್ತಾರೆ.

13. ವಾದಿಯು ಹೇಳುವಂತೆ ಲಾಗಾಯ್ತಿನಿಂದಲೂ ದಾವಾ ಸ್ವತ್ತಿನಲ್ಲಿ ವಾದಿಯು ಅನಧಿಕೃತ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ ಎಂಬುದಾಗಿ ಹೇಳಿದ್ದಾರೆ. ಈ ಕುರಿತಂತೆ ಯಾವುದೇ ದಾಖಲೆಗಳನ್ನು ವಾದಿಯು ಹಾಜರುಪಡಿಸಿರುವುದಿಲ್ಲ. ಅದೇ ರೀತಿಯಾಗಿ, ದಾವಾ ಸ್ವತ್ತಿನಲ್ಲಿ ತಾನು ಜೋಳ, ಶುಂಠಿ ಹಾಗೂ ಇತರೆ ಬೆಳೆಗಳನ್ನು ಬೆಳೆದ ಬಗ್ಗೆ ಹಾಗೂ ಸದರಿ ಸ್ವತ್ತಿನಲ್ಲಿ ವಾಸದ ಮನೆಯನ್ನು ನಿರ್ಮಿಸಿಕೊಂಡಿರುವ ಕುರಿತು ಯಾವುದೇ ಅಧಿಕೃತ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ವಾದಿಯು

ದಾವಾ ಸ್ವತ್ತಿನಲ್ಲಿನ ತಮ್ಮ ಸ್ವಾಧೀನವನ್ನು ತೋರಿಸಲು ಅಕ್ಕ-ಪಕ್ಕದ ಹಿಡುವಳಿದಾರರನ್ನು ಸಹ ನ್ಯಾಯಾಲಯದ ಮುಂದೆ ವಿಚಾರಣೆಗೆ ಒಳಪಡಿಸಿರುವುದಿಲ್ಲ.

14. ಸದರಿ ಪ್ರತಿವಾದಿಯರು ವಾದಿಯ ಗಂಡ ಹಾಗೂ ಗಂಡನ ಸಂಬಂಧಿಕರಾಗಿರುತ್ತಾರೆ. ವಾದಿ ಮತ್ತು 1 ನೇ ಪ್ರತಿವಾದಿಯ ನಡುವೆ ಇದುವರೆಗೆ ವಿವಾಹ ವಿಚ್ಛೇದನವಾಗಿರುವುದಿಲ್ಲ ಹಾಗೂ ಈ ಕುರಿತಂತೆ ಯಾವುದೇ ದಾಖಲೆಗಳನ್ನು ವಾದಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ **ILR** 1999 **KAR** 3037 ರ ತೀರ್ಪಿನಲ್ಲಿ,

> **"When once joint possession is admitted by the plaintiff, injunction cannot be issued as against a co-owner"**

ಮೇಲ್ಕಂಡ ತೀರ್ಪಿನಂತೆ ಕುಟುಂಬದ ಸದಸ್ಯರ ನಡುವೆ ಪ್ರತಿಬಂಧಕಾಜ್ಞೆ ಆದೇಶವನ್ನು ನೀಡಲಾಗುವುದಿಲ್ಲ. ಈ ಪ್ರಕರಣದಲ್ಲಿ ಮೊದಲನೆಯದಾಗಿ, ವಾದಿಯು ದಾವೆ ಹೂಡುವ ದಿನದಂದು ದಾವಾ ಸ್ವತ್ತಿನ ಕಾನೂನುಬದ್ಧ ಸ್ವಾಧೀನ ಅನುಭವದಲ್ಲಿ ಇದ್ದಾರೆ ಎನ್ನುವುದನ್ನು ಸಾಬೀತುಪಡಿಸಲು ವಿಫಲರಾಗಿದ್ದಾರೆ.

15. ನಿ.ಪಿ-4 ಮತ್ತು 5 ರಂತೆ ವಾದಿಯು ಸಾಗರದ ಗ್ರಾಮಾಂತರ ಪೊಲೀಸ್ ಠಾಣೆ ಮತ್ತು ಮಾನ್ಯ ಉಪತಹಶೀಲ್ದಾರರು, ಆನಂದಪುರ ಹೋಬಳಿ ಇವರಿಗೆ ದಾವಾ ಸ್ವತ್ತಿನಲ್ಲಿ

ಅಕ್ರಮವಾಗಿ ಪ್ರತಿವಾದಿಯರು ಕಲ್ಲು ಗಣಿಗಾರಿಕೆ ನಡೆಸುತ್ತಿರುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಅರ್ಜಿಯನ್ನು ನೀಡಿದ್ದಾರೆ. ಸದರಿ ನಿ.ಪಿ–5 ರ ದಾಖಲೆಯನ್ನು ಪರಿಶೀಲನೆ ಮಾಡಿದಾಗ ಆ ಅರ್ಜಿಯಲ್ಲಿ ವಾದಿಯು:

> "ತ್ಯಾಗರ್ತಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಸರ್ವೆ ನಂಬರ್ 37 ರಲ್ಲಿ 4 ಎಕರೆ ನಮ್ಮ ಅತ್ತೆ–ಮಾವರಾದ ದಿವಂಗತ ಮಂಜಪ್ಪ ಕೋಂ ದೇವಮ್ಮ ಇವರ ಹೆಸರಿಗೆ ಜಮೀನಿದ್ದು ಮತ್ತು ಇವರಿಗೆ ಇಬ್ಬರು ಜನ ಗಂಡುಮಕ್ಕಳು ಇದ್ದು, ಜಮೀನು ಇನ್ನು ಮಕ್ಕಳ ಹೆಸರಿಗೆ ಆಗಿರುವುದಿಲ್ಲ. ಆದಕಾರಣ ಜಮೀನಿನಲ್ಲಿ ಈಗ ಅಕ್ರಮವಾಗಿ ಕಲ್ಲುಕೋರೆ ಮಾಡುತ್ತಿದ್ದು, ಸ್ಥಳ ಪರಿಶೀಲನೆ ಮಾಡಿ ನ್ಯಾಯ ಕೊಡಿಸಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ"

ಎಂದು ವಾದಿಯು ಅರ್ಜಿಯನ್ನು ನೀಡಿದ್ದಾರೆ. ಸದರಿ ಅರ್ಜಿಯಂತೆ ಸರ್ವೆ ನಂಬರ್ 37 ರಲ್ಲಿ 4 ಎಕರೆ ಜಮೀನು ವಾದಿಯ ಅತ್ತೆ–ಮಾವನ ಹೆಸರಿಗೆ ಇದೆ ಎಂಬುದಾಗಿ ಒಪ್ಪಿಕೊಂಡಿದ್ದಾರೆ. ಆದಕಾರಣ, ಸದರಿ ಅರ್ಜಿಯು ಈ ದಾವೆಯ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನೀಡಿದ ಅರ್ಜಿಯಾಗಿರುವುದಿಲ್ಲ. ಅದೂ ಅಲ್ಲದೆ ಒಂದು ವೇಳೆ ವಾದಿಯು ಸರ್ಕಾರಿ ಜಮೀನಿನಲ್ಲಿ ಅಥವಾ ಸರ್ವೆ ನಂಬರ್ 37 ರ ಜಮೀನಿನಲ್ಲಿ ಪ್ರತಿವಾದಿಯರು ಕಲ್ಲು ಗಣಿಗಾರಿಕೆ ನಡೆಸುತ್ತಿದ್ದರೆ, ಸಂಬಂಧಪಟ್ಟ ಇಲಾಖೆಯವರು ಮತ್ತು ಅಧಿಕಾರಿಗಳು ಅಗತ್ಯ ಕ್ರಮವನ್ನು ತೆಗೆದುಕೊಳ್ಳಲು ಸ್ವತಂತ್ರರಾಗಿರುತ್ತಾರೆ. ಸದರಿ ಕ್ರಮವನ್ನು ತಡೆಯುವಂತೆ ವಾದಿಯು ಈ ದಾವೆಯ ಮೂಲಕ ಆದೇಶವನ್ನು ಕೋರುವುದು ಸೂಕ್ತವಾಗಿರುವುದಿಲ್ಲ.

16. ಅದೇ ರೀತಿಯಾಗಿ, ನಿ.ಪಿ–4 ರ ಸ್ವೀಕೃತಿಯೊಂದಿಗೆ ವಾದಿಯು ನೀಡಿದ ದೂರನ್ನು ಹಾಜರುಪಡಿಸಿರುವುದಿಲ್ಲ. ನಿ.ಪಿ–4 ರಲ್ಲಿ ದಾವಾ ಸ್ವತ್ತಿನ ಸರ್ವೆ ನಂಬರ್ ಸಹ ನಮೂದು ಆಗಿರುವುದಿಲ್ಲ. ಆದ್ದರಿಂದ, ವಾದಿಯು ಮೊದಲನೆಯದಾಗಿ, ದಾವಾ ಸ್ವತ್ತಿನ ತನ್ನ ಸ್ವಾಧೀನವನ್ನು, ಕಾನೂನುಬದ್ಧ ಸ್ವಾಧೀನವನ್ನು ತೋರಿಸಲು ವಿಫಲರಾಗಿರುತ್ತಾರೆ. ಅದೇ ರೀತಿಯಾಗಿ, ಪ್ರತಿವಾದಿಯು ಸದರಿ ಸ್ವಾಧೀನಕ್ಕೆ ಅಡ್ಡಿಪಡಿಸುತ್ತಿದ್ದಾರೆ ಎಂಬುದನ್ನು ಸಹ ಸಾಬೀತುಪಡಿಸಲು ವಿಫಲರಾಗಿದ್ದಾರೆ.

17. ಮೇಲ್ಕಂಡ ತೀರ್ಪಿನಂತೆ ವಾದಿ ಮತ್ತು ಪ್ರತಿವಾದಿಯರು ಕುಟುಂಬದ ಸದಸ್ಯರಾಗಿರುವುದರಿಂದ, ಅವರ ನಡುವೆ ಪ್ರತಿಬಂಧಕಾಜ್ಞೆ ಆದೇಶವನ್ನು ನೀಡಲಾಗುವುದಿಲ್ಲ. ಪ್ರತಿಬಂಧಕಾಜ್ಞೆ ಆದೇಶವನ್ನು ನೀಡುವುದು ನ್ಯಾಯಾಲಯದ ವಿವೇಚನಾಧಿಕಾರವಾಗಿದ್ದು, ಈ ದಾವೆಯಲ್ಲಿ ಪ್ರತಿಬಂಧಕಾಜ್ಞೆ ಆದೇಶವನ್ನು ನೀಡಲು ಅಗತ್ಯ ಅಂಶಗಳನ್ನು ವಾದಿಯು ಸಾಬೀತುಪಡಿಸಲು ವಿಫಲರಾಗಿರುತ್ತಾರೆ. ಅದೇ ರೀತಿಯಾಗಿ, ಸರ್ಕಾರಿ ಭೂಮಿಯ ಮೇಲೆ ಖಾಸಗಿ ವ್ಯಕ್ತಿಗಳ ಪರವಾಗಿ ಪ್ರತಿಬಂಧಕಾಜ್ಞೆ ಆದೇಶವನ್ನು ನೀಡುವುದು ಸೂಕ್ತವಲ್ಲ. ಆದಕಾರಣ, ಸದರಿ ಮೇಲಿನ ಅಂಶ 1 ರಿಂದ 3 ನ್ನು ಸಾಬೀತುಪಡಿಸಲು ವಾದಿಯು ವಿಫಲರಾಗಿದ್ದಾರೆ ಎಂದು ಅಭಿಪ್ರಾಯಪಟ್ಟು, ಮೇಲಿನ ಅಂಶ 1 ರಿಂದ 3 ನ್ನು **ನಕಾರಾತ್ಮಕವಾಗಿ** ಉತ್ತರಿಸುತ್ತೇನೆ.

18. **ಅಂಶ 4**:– ಈ ಮೇಲ್ಕಂಡ ಅಂಶ 1 ರಿಂದ 3 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ ಈ ಕೆಳಕಂಡಂತೆ,

## <u>ಆದೇಶ</u>

ವಾದಿಯ ದಾವೆಯನ್ನು ವೆಚ್ಚಗಳ ಸಹಿತ

ವಜಾಗೊಳಿಸಲಾಗಿದೆ.

ತೀರ್ಪಿನಂತೆ ಡಿಕ್ರಿ ಬರೆಯತಕ್ಕದ್ದು.

*(ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರಿನಲ್ಲಿ ಬೆರಳಚ್ಚು ಮಾಡಿಸಿ ನಂತರ ಅದನ್ನು ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ, 12 ನೇ ಆಗಸ್ಟ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದ್ದೇನೆ.)*

**(ಮಾದೇಶ ಎಂ.ವಿ.,)**
ಪ್ರಭಾರ ಒಂದನೇ ಹೆಚ್ಚುವರಿ ಸಿವಿಲ್
ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಸಾಗರ.

## <u>ಅನುಬಂಧ</u>

**<u>ವಾದಿಯರ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ</u>:**

ಪಿಡಬ್ಲ್ಯೂ.1 : ನೇತ್ರಾವತಿ.

**<u>ವಾದಿಯ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ</u>:**

| | | |
|---|---|---|
| ನಿಪಿ.1 | : | ಸರ್ವೇ ಸಂಖ್ಯೆ 43 ಆರ್ ಎಸ್ ನ 2018–19 ನೇ ಸಾಲಿನ ಪಹಣಿ ಪತ್ರಿಕೆ. |
| ನಿಪಿ.2 | : | ಸರ್ವೇ ಸಂಖ್ಯೆ 37 ಆರ್ ಎಸ್ ನ 2021–22 ನೇ ಸಾಲಿನ ಪಹಣಿ ಪತ್ರಿಕೆ. |
| ನಿಪಿ.3 | : | ಹಿಂಬರಹ. |
| ನಿಪಿ.4 | : | ಸ್ವೀಕೃತಿ. |

ನಿ.ಪಿ.5 : ದಿನಾಂಕ 08.10.2021 ರಂದು ತಹಶೀಲ್ದಾರ್ ರವರಿಗೆ ನೀಡಿದ ಪತ್ರ.

**ಪ್ರತಿವಾದಿಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:**

ಏನೂ ಇಲ್ಲ

**ಪ್ರತಿವಾದಿಯ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ:**

ಏನೂ ಇಲ್ಲ

**ಪ್ರಭಾರ ಒಂದನೇ ಹೆಚ್ಚುವರಿ ಸಿವಿಲ್**
**ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಸಾಗರ.**